(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ಅಸಲು ದಾವೆ ನಂ.124/2009

ದಿನಾಂಕಃ 04-02-2025, ಡಿ ಡಬ್ಲ್ಯೂ-4

| | |
|---|---|
| ಹೆಸರುಃ | ರಾಸು ನಾಗರಾಜು |
| ತಂದೆಯ ಹೆಸರುಃ | ಆರ್ ಕೆ ಸುಬ್ಬರಾಯ |
| ವಯಸ್ಸುಃ | 73 ವರ್ಷ |
| ವೃತ್ತಿಃ | ಪತ್ರ ಬರಹಗಾರರು |
| ವಾಸಃ | ರಾಮನಾಥಪುರ ಗ್ರಾಮ |

**1ನೇ ಪ್ರತಿವಾದಿಯ ಪರ ಸಾಕ್ಷಿದಾರರ ಮುಖ್ಯ ವಿಚಾರಣೆಃ ಶ್ರೀ ಆರ್ ಕೆ ಎಂ ವಕೀಲರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿ ಸದರಿ ದಾಖಲೆ ಮರಣ ಶಾಸನ ಪತ್ರವಾಗಿದ್ದು, ಸದರಿ ಪತವನ್ನು ಶಿಡ್ಲೇಗೌಡ ಎಲ್ ಎಂ ಮತ್ತು ತಾಯಮ್ಮ ರವರು ವಾದಿ, 2 ಮತ್ತು 3 ನೇ ಪ್ರತಿವವಾದಿರವರ ಪರವಾಗಿ ಬರೆಸಿರುತ್ತಾರೆ. ಸದರಿ ಪತ್ರವನ್ನು ನಾನು ತಯಾರಿಸಿರುತ್ತೇನೆ. ಸದರಿ ಪತ್ರಕ್ಕೆ ನಾನು ಬಿಕ್ಲಮ್ ದಾರರಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-10ಹೆಚ್ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಶಿಡ್ಲೇಗೌಡ ಎಲ್ ಎಂ ಮತ್ತು ತಾಯಮ್ಮ ರವರು ಸಹಿ ಮಾಡಿರುತ್ತಾರೆ. ಸಾಕ್ಷಿದಾರರಾಗಿ ಮಂಜೇಗೌಡ ಮತ್ತು ಕೃಷ್ಣ ಎಂಬುವವರು ಸಹಿ ಮಾಡಿರುತ್ತಾರೆ. ತಾಯಮ್ಮ ರವರು ನನ್ನ ಸಮಕ್ಷಮ ಮರಣ ಶಾಸನ ಪತ್ರಕ್ಕೆ ಹೆಬ್ಬೆಟ್ಟಿನ ಗುರುತನ್ನು ಎಲ್ಲಾ ಪುಟಗಳಲ್ಲೂ ಮಾಡಿರುತ್ತಾರೆ. ಸದರಿ ತಾಯಮ್ಮ ರವರ ಹೆಬ್ಬೆಟ್ಟಿನ ಗುರುತುಗಳನ್ನು ಕ್ರಮವಾಗಿ ನಿಪಿ-10ಐ ರಿಂದ ನಿಪಿ-10ಎಂ ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಪಾಟೀ ಸವಾಲಿಗೆ  ಕಾಲವಕಾಶವನ್ನು ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ.ಸ. ಇದೆ.

(**ರಘು ಎಂ.**)

**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ**

**ಅರಕಲಗೂಡು.**

®